

بسم اللهِ الرّحمٰن الرّحيم

# ಯೌಮೇ ಮಸೀಹ್ ಮೌಊದ್ ಅಲೈಹಿಸ್ಸಲಾಮ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **25–03–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಎರಡು ದಿನಗಳ ಹಿಂದೆ ಮಾರ್ಚ್ 23 ಆಗಿತ್ತು. ಆ ದಿನ ಅಹ್ಮದಿಯಾ ಜಮಾಅತಿಗೆ ಸಂಬಂಧಿಸಿ ಬಹಳ ಮಹತ್ವಪೂರ್ಣ ದಿನವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನ ಈಡೇರಿದ ದಿನ. ಆ ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಕಟಿಸಿದ ಭವಿಷ್ಯವಾಣಿ ಈಡೇರಿತು ಮತ್ತು ಇಸ್ಲಾಮಿನ ಪುನಶ್ಚೇತನದ ಕಾಲಘಟ್ಟ ಆರಂಭ ಗೊಂಡಿತು. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಆ ದಿನ ತಾನು ಮಸೀಹ್ ಮೌಊದ್ ಮತ್ತು ಮಹ್‌ದೀ ಮಅ್‌ಹೂದ್ ಎಂದು ಪ್ರಕಟಿಸಲು ಅಲ್ಲಾಹನು ಅನುಮತಿ ನೀಡಿದ ದಿನವಾಗಿತ್ತು. ಅಲ್ಲಾಹನ ಏಕತ್ವವನ್ನು ಲೋಕದಲ್ಲಿ ಸ್ಥಾಪಿಸಲು ಸಾಕ್ಷಾಧಾರಗಳನ್ನು ಅವರು ನೀಡಬೇಕಾಗಿತ್ತು ಮತ್ತು ಇಸ್ಲಾಮ್ ಧರ್ಮದ ಶ್ರೇಷ್ಠತೆಯನ್ನು ಇತರ ಎಲ್ಲ ಧರ್ಮಗಳ ಮೇಲೆ ಸ್ಥಾಪಿಸಿ ಇಸ್ಲಾಮ್ ಧರ್ಮವನ್ನು ಪರಿಪೂರ್ಣ ಧರ್ಮವೆಂದು ಅವರು ಸ್ಥಾಪಿಸಬೇಕಾಗಿತ್ತು. ಅಲ್ಲಾಹನ ಅಂತಿಮ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿಯನ್ನು ಜನರ ಹೃದಯಗಳಲ್ಲಿ ತುಂಬುವ ಕೆಲಸ ಅವರಿಗೆ ಮಾಡಲಿಕ್ಕಿತ್ತು. ಇಂದು ನಾವು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿ ಸೇರಿರುವ ಅದೃಷ್ಟಶಾಲಿ ಜನರಾಗಿದ್ದೇವೆ. ನಾವು ನೆನಪಿಡಬೇಕಾದು ದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವುದು ನಾವು ಸಂತೋಷ ಪಡಬೇಕಾದ ಮತ್ತು ಕೃತಜ್ಞತೆ ಅರ್ಪಿಸಬೇಕಾದ ವಿಷಯವಾಗಿದ್ದರೂ ಅದರೊಂದಿಗೆ ನಮ್ಮ ಹೊಣೆಗಾರಿಕೆಗಳು ಸಹ ವರ್ಧಿಸುವಂತಹದೂ ಆಗಿದೆ. ಆದುದರಿಂದ ನಾವು ನಮ್ಮ ಹೊಣೆಗಾರಿಕೆಗಳನ್ನು ಗುರುತಿಸಬೇಕು ಮತ್ತು ಅವುಗಳನ್ನು ಈಡೇರಿಸುವ ಬಗ್ಗೆ ಗಮನ ಹರಿಸುವ ಆವಶ್ಯಕತೆ ಇದೆ. ನಮ್ಮ ಹೊಣೆಗಾರಿಕೆಗಳು ಯಾವುವು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಯಾವ ಕೆಲಸಗಳನ್ನು ಈಡೇರಿಸಲು ಅಲ್ಲಾಹನು ನಿಯೋಜಿಸಿರುವನೋ ಆ ಕೆಲಸಗಳನ್ನು ನಾವು ಮುಂದುವರಿಸಬೇಕಾದುದು ನಮ್ಮ ಹೊಣೆಗಾರಿಕೆಯಾಗಿದೆ. ಹಾಗೆ ಮಾಡಿದರೆ ಮಾತ್ರ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದವರಲ್ಲಿ ಮತ್ತು ಹೊಸ ಆಕಾಶ ಮತ್ತು ಹೊಸ ಭೂಮಿ ನಿರ್ಮಿಸುವವರಲ್ಲಿ ನಾವು ಸೇರುವವರಾ ಗುವೆವು. ನಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಲು ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಡೆಗೆಯೇ ನೋಡಬೇಕಾಗಿದೆ. ಅವರನ್ನು ನಿಯೋಜಿಸಿದ ಉದ್ದೇಶಗಳೇನು. ಅವುಗಳ ಬಗ್ಗೆ ನಾವು ಎಷ್ಟರ ಮಟ್ಟಿಗೆ ಮನವರಿಕೆ ಮಾಡಿದ್ದೇವೆ. ನಾವು ಎಷ್ಟರ ಮಟ್ಟಿಗೆ ಅವುಗಳ ಬಗ್ಗೆ ಕಾರ್ಯ ಪ್ರವೃತ್ತರಾಗಿದ್ದೇವೆ. ಅವುಗಳನ್ನು ಹಬ್ಬಿಸಲು ನಾವು ಎಷ್ಟರ ಮಟ್ಟಿಗೆ ಕೆಲಸ ಮಾಡಿದ್ದೇವೆ ಎಂದು ನೋಡಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ನನ್ನನ್ನು ಅಲ್ಲಾಹನು ಯಾವ ಕೆಲಸಕ್ಕೋಸ್ಕರ ನಿಯೋಜಿಸಿರುವನೋ ಅದು ಇದಾಗಿದೆ: ಅಲ್ಲಾಹನ ಮತ್ತು ಸೃಷ್ಟಿಗಳ ಮಧ್ಯೆ ಇರುವ ಸಂಬಂಧದಲ್ಲಿ ಉಂಟಾಗಿರುವ ಅಡೆತಡೆಗಳನ್ನು ದೂರಸರಿಸಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ಸ್ಥಾಪಿತವಾಗುವಂತೆ ಮಾಡುವುದಾಗಿದೆ. ಎರಡನೆಯದಾಗಿ ಸತ್ಯವನ್ನು ಪ್ರಕಟಗೊಳಿಸುವ ಮೂಲಕ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಶಾಂತಿ ಸೌಹಾರ್ದದ ಅಸ್ತಿವಾರ ಹಾಕುವುದಾಗಿದೆ. ಮೂರನೆಯದಾಗಿ ಲೋಕದ ಕಣ್ಣಿನಿಂದ ಮರೆಯಾಗಿರುವ ಧಾರ್ಮಿಕ ಸತ್ಯಗಳನ್ನು ಬಹಿರಂಗಗೊಳಿಸುವುದಾಗಿದೆ. ನಾಲ್ಕನೆಯದಾಗಿ ಶಾರೀರಿಕ ಅಂಧಕಾರಗಳ ಕೆಳಗೆ ದಬ್ಬಲ್ಪಟ್ಟಿರುವ ಆಧ್ಯಾತ್ಮಿಕತೆಯ ಮಾದರಿಯನ್ನು ಪ್ರಕಟಿಸುವುದಾಗಿದೆ. ಅನಂತರ ಅಲ್ಲಾಹನ ಶಕ್ತಿಗಳು ಮನುಷ್ಯನೊಳಗೆ ಪ್ರವೇಶಿಸಿ, ಶ್ರದ್ಧೆಯ ಕೇಂದ್ರೀಕರಣ ಅಥವಾ ಪ್ರಾರ್ಥನೆ ಮೂಲಕ ಪ್ರಕಟವಾಗುವುದನ್ನು, ಬರೇ ಮಾತಿನ ಮೂಲಕವಲ್ಲ ಪ್ರತ್ಯಕ್ಷ ಪ್ರಕಟಣೆ ಮೂಲಕ, ವಿವರಿಸಿ ಕೊಡುವುದಾಗಿದೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಶುದ್ಧವಾದ ಮತ್ತು ಪ್ರಕಾಶಮಾನವಾದ ಏಕದೇವ ವಿಶ್ವಾಸವನ್ನು ಪ್ರತಿಯೊಂದು ರೀತಿಯ ಬಹುದೇವಾರಾಧನೆಯ ಕೊಳೆಯಿಂದ ಮುಕ್ತಗೊಳಿಸಿ ಜನರ ಹೃದಯದಲ್ಲಿ ಅದನ್ನು ಪುನಃ ಸ್ಥಾಪಿಸುವಂತೆ ಮಾಡುವುದಾಗಿದೆ. ಇವುಗಳೆಲ್ಲಾ ಕೇವಲ ನನ್ನ ಶಕ್ತಿಯಿಂದ ಸಂಭವಿಸ ಲಾರದು. ಭೂಮ್ಯಾಕಾಶಗಳ ದೇವನಾದ ಅಲ್ಲಾಹನ ಶಕ್ತಿಯಿಂದ ಇವುಗಳು ಸಾಧಿಸಲ್ಪಡುವುವು.

ಈ ಉಲ್ಲೇಖದಲ್ಲಿ ಏಳು ಮೂಲಭೂತ ಮಹತ್ವಪೂರ್ಣ ವಿಷಯಗಳನ್ನು ವಿವರಿಸಲಾಗಿವೆ. ಅವು ಈ ಕಾಲಘಟ್ಟದ ಆವಶ್ಯಕತೆಗಳಾಗಿವೆ. ಅವುಗಳನ್ನು ಸಂಕ್ಷಿಪ್ತವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೇಲಿನ ಉಲ್ಲೇಖದಲ್ಲಿ ವಿವರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು "ನನ್ನನ್ನು ಈ ಕೆಲಸಕ್ಕೋಸ್ಕರ ಅಲ್ಲಾಹನು ಕಳುಹಿಸಿದ್ದಾನೆ" ಎಂದು ಹೇಳಿರುವಾಗ ಅದರ ಅರ್ಥವೇನೆಂದರೆ, ಅವರನ್ನು ನಂಬುವವರು ಈ ವಿಷಯಗಳನ್ನು ತಮ್ಮಲ್ಲಿ ಅಳವಡಿಸಿ ಇಸ್ಲಾಮಿನ ಸೌಂದರ್ಯವನ್ನು ಮತ್ತು ಅದು ಜೀವಂತ ಧರ್ಮ ಎಂಬುದನ್ನು ಲೋಕಕ್ಕೆ ತೋರಿಸಿಕೊಡಬೇಕು. ಆದುದರಿಂದ ನಮ್ಮ ಪ್ರಥಮ ಮತ್ತು ಎಲ್ಲದಕ್ಕಿಂತಲೂ ದೊಡ್ಡ ಕಡ್ಡಾಯ ಕರ್ತವ್ಯ ಏನೆಂದರೆ ನಾವು ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ವರ್ಧಿಸಬೇಕು ಮತ್ತು ಅದನ್ನು ಬಲಪಡಿಸಬೇಕು ಎಂಬುದಾಗಿದೆ. ಅಲ್ಲಾಹ್, ಅವನ ಸಂದೇಶವಾಹಕ ಮತ್ತು ಅವನ ಧರ್ಮದೊಂದಿಗೆ ನಮ್ಮ ಸಂಬಂಧ, ನಮ್ಮ ಪ್ರೀತಿ ಮತ್ತು ನಿಷ್ಠೆ ವರ್ಧಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದೊಂದಿಗೆ ಧಾರ್ಮಿಕ ಯುದ್ಧಗಳು ಕೊನೆಗೊಂಡಿವೆ ಎಂದು ಲೋಕಕ್ಕೆ ನಾವು ತಿಳಿಸಬೇಕು. ಈಗ ಲೋಕವನ್ನು ಏಕ ಸಮುದಾಯ ವನ್ನಾಗಿ ಮಾಡಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಸತ್ಯಸಂಧನಾದ ದಾಸನಿಗೆ ಮಾತ್ರ ಸಾಧ್ಯವಾಗುವು ದಾಗಿದೆ. ಅವರನ್ನು ಅಲ್ಲಾಹನು ಎಲ್ಲ ಪ್ರವಾದಿಗಳ ಪೋಷಾಕಿನಲ್ಲಿ ಕಳುಹಿಸಿರುವನು. ಹಝ್ರತ್

ಮಸೀಹ್ ಮೌಊದ್ ಅಲೈಹಿ ಸ್ಸಲಾಮರ ಆಗಮನದ ಉದ್ದೇಶವನ್ನು ಈಡೇರಿಸಲು ಇಸ್ಲಾಮಿನ ಸೌಂದರ್ಯಭರಿತ ಉಪದೇಶ ಮತ್ತು ಅದರ ಸತ್ಯತೆಯನ್ನು ನಾವು ಲೋಕಕ್ಕೆ ಸ್ಪಷ್ಟಪಡಿಸಿಕೊಡಬೇಕು. ಮತ್ತು ಅದಕ್ಕೋಸ್ಕರ ನಾವು ನಮ್ಮ ನಡೆವಳಿಕೆಗಳನ್ನು ಮಾದರಿಯನ್ನಾಗಿ ಮಾಡಬೇಕಾಗಿದೆ. ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಗಳಿಸಿದ ಉದಾಹರಣೆಯನ್ನು ನಾವು ಸ್ಥಾಪಿಸಬೇಕು. ನಮ್ಮ ಆತ್ಮಾಭಿಲಾಷೆಗಳನ್ನು ದೂರಸರಿಸಬೇಕು. ಅಲ್ಲಾಹನು ಹಿಂದೆ ಪ್ರಾರ್ಥನೆಗಳನ್ನು ಆಲಿಸುತ್ತಿದ್ದ ಹಾಗೆ ಈಗ ಸಹ ಪ್ರಾರ್ಥನೆಗಳನ್ನು ಆಲಿಸುತ್ತಾ ನೆಂದೂ ತನ್ನ ವಿಶಿಷ್ಟ ದಾಸರಿಗೆ ಹಿಂದೆ ಉತ್ತರ ನೀಡುತ್ತಿದ್ದ ಹಾಗೆ ಈಗ ಸಹ ಆ ಅಲ್ಲಾಹನು ಉತ್ತರ ನೀಡುತ್ತಾನೆಂದೂ ನಾವು ಲೋಕಕ್ಕೆ ತೋರಿಸಿಕೊಡಬೇಕು. ಅವನು ತನ್ನ ನಿಷ್ಠಾವಂತ ದಾಸರ ಹೃದಯಗಳಿಗೆ ನೆಮ್ಮದಿ ನೀಡುತ್ತಾನೆ ಎಂದು ತೋರಿಸಬೇಕು. ಅಲ್ಲಾಹನು ಏಕದೇವನೆಂದು ಲೋಕಕ್ಕೆ ನಾವು ತಿಳಿಸಿಕೊಡಬೇಕು. ಪ್ರತಿಯೊಂದು ವಸ್ತು ನಾಶವಾಗಲಿದೆ ಅಲ್ಲಾಹನ ಅಸ್ತಿತ್ವ ಮಾತ್ರ ಯಾವಾಗಲೂ ಇರುವುದು. ನಮ್ಮ ಬದುಕು ಆ ಏಕನಾದ, ಸದಾಕಾಲ ಜೀವಂತನಾಗಿರುವ ದೇವನೊಂದಿಗೆ ಜೋಡಿಸಿರುವುದರಲ್ಲಿಯೇ ಇರುತ್ತದೆ. ನಾವು ಮಾರ್ಚ್ 23ರಂದು ಯೌಮೇ ಮಸೀಹ್ ಮೌಊದ್ ದಿನಾಚರಣೆ ಮಾಡುವಾಗ ನಾವು ಈ ಎಲ್ಲ ವಿಷಯಗಳನ್ನು ಅವಲೋಕಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲೋಕದಲ್ಲಿ ಇವುಗಳನ್ನು ಉಂಟುಮಾಡಲು ಆಗಮಿಸಿದ್ದರು. ಅವರನ್ನು ನಂಬುವವರಾದ ನಮ್ಮಲ್ಲಿ ಈ ವಿಷಯಗಳು ಉಂಟಾಗಿವೆಯೋ ಅಥವಾ ನಾವು ಈ ಪರಿವರ್ತನೆಗಳನ್ನು ನಮ್ಮಲ್ಲಿ ಉಂಟುಮಾಡಲು ಪ್ರಯತ್ನ ಮಾಡುತ್ತಾ ಇರುವೆಯೇ ಎಂದು ನಾವು ಅವಲೋಕಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇನ್ನೂ ಅನೇಕ ಸ್ಥಳಗಳಲ್ಲಿ ತನ್ನ ಆಗಮನದ ಉದ್ದೇಶಗಳ ಬಗ್ಗೆ ಹೆಚ್ಚಿನ ವಿವರಣೆಗಳನ್ನು ನೀಡಿದ್ದಾರೆ. ಅವರ ಇತರ ಕೆಲವು ಉಲ್ಲೇಖಗಳನ್ನು ಸಹ ನಿಮ್ಮ ಮುಂದಿರಿಸುತ್ತೇನೆ. ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ನನ್ನನ್ನು ಕೇವಲ ಈ ಉದ್ದೇಶಕ್ಕೋಸ್ಕರ ಕಳುಹಿಸಲಾಗಿದೆ. ಅಲ್ಲಾಹನ ಸೃಷ್ಟಿಗಳಿಗೆ ಈ ಸಂದೇಶ ನಾನು ತಲಪಿಸಬೇಕಾಗಿದೆ. ಎಲ್ಲ ಧರ್ಮಗಳ ಪೈಕಿ ಅಲ್ಲಾಹನ ತೃಪ್ತಿ ಪ್ರಕಾರ ಪವಿತ್ರ ಖುರ್‌ಆನ್ ತಂದ ಧರ್ಮವೇ ಸತ್ಯ ಧರ್ಮವಾಗಿದೆ. ಮೋಕ್ಷದ ಗೃಹವನ್ನು ಪ್ರವೇಶಿಸಲಿಕ್ಕಿರುವ ಬಾಗಿಲು **ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್** ಆಗಿದೆ.

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ನನ್ನ ಮಾತನ್ನು ಶ್ರದ್ಧೆಯಿಂದ ಆಲಿಸಿರಿ. ನಾನು ನಿಯೋಜಿಸಲ್ಪಟ್ಟುದರ ಮೂಲ ಉದ್ದೇಶ ಏನು? ನನ್ನ ಆಗಮನದ ಉದ್ದೇಶ ಇಸ್ಲಾಮಿನ ಪುನಶ್ಚೇತನ ಮತ್ತು ಅದಕ್ಕೆ ಬೆಂಬಲ ನೀಡುವುದಾಗಿದೆ. ಆದರೆ ಇದರ ಬಗ್ಗೆ ನಾನು ಹೊಸ ಒಂದು ಶರೀಅತ್ ತಂದಿರುವುದಾಗಿ ಅಥವಾ ಹೊಸ ಆಜ್ಞೆ ನೀಡುವುದಾಗಿ ಭಾವಿಸಬಾರದು. ಅಥವಾ ಹೊಸ ಗ್ರಂಥ ಅವತೀರ್ಣವಾಗುವುದೆಂದು ಭಾವಿಸಬಾರದು. ಖಂಡಿತ ಹೀಗೆ ಆಗಲಾರದು. ಯಾರಾದರೂ ಹೀಗೆ ಯೋಚಿಸುವುದಾದರೆ ಅವನು ದಾರಿ ತಪ್ಪಿದವನೂ ಧರ್ಮ ರಹಿತನೂ ಆಗಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಶರೀಅತ್ ಮತ್ತು ನುಬುವ್ವತ್ ಕೊನೆಗೊಂಡಿದೆ. ಇನ್ನು ಯಾವುದೇ ಶರೀಅತ್ ಬರಲಾರದು. ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಗಿದೆ. ಅದರಲ್ಲಿ ಒಂದು ಅಕ್ಷರವಾಗಲೀ ಬಿಂದುವಾಗಲೀ ಹೆಚ್ಚು ಕಡಿಮೆ ಆಗಲಾರದು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹಗಳು ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳೂ ಮಾರ್ಗದರ್ಶನಗಳ ಫಲಗಳೂ ಎಂದೂ ಕೊನೆಗೊಳ್ಳಲಾರವು ಎಂಬುದು ಸತ್ಯವಾಗಿದೆ. ಅವು ಪ್ರತಿಯೊಂದು ಕಾಲಘಟ್ಟದಲ್ಲಿ ಹೊಸ ಹೊಸ ರೀತಿಯಲ್ಲಿ ಲಭಿಸುವುವು. ಈ ಅನುಗ್ರಹಗಳ ಪುರಾವೆಯಾಗಿ ಅಲ್ಲಾಹನು ನನ್ನನ್ನು ನಿಯೋಜಿಸಿ ರುವನು.

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ನನ್ನ ಆಗಮನಕ್ಕೆ ಎರಡು ಉದ್ದೇಶಲಕ್ಷ್ಯಗಳಿವೆ. ಮುಸ್ಲಿಮರಿಗೋಸ್ಕರ ನನ್ನ ಆಗಮನದ ಉದ್ದೇಶ ಇದಾಗಿದೆ: ಮುಸ್ಲಿಮರು ತಖ್ವ ಮತ್ತು ಪರಿಶುದ್ಧಿ ಹೊಂದಿದವರಾಗ ಬೇಕು. ಅವರು ಸತ್ಯಸಂಧರಾದ ಮುಸ್ಲಿಮರಾಗಬೇಕು. ಅಲ್ಲಾಹನು ಮುಸ್ಲಿಮರು ಹೇಗಿರಬೇಕೆಂದು ಇಚ್ಛಿಸುತ್ತಾನೋ ಹಾಗೆ ಅವರು ಆಗಬೇಕು. ಕ್ರೈಸ್ತರಿಗೋಸ್ಕರ ನನ್ನ ಆಗಮನದ ಉದ್ದೇಶ ಶಿಲುಬೆಯನ್ನು ಮುರಿಯುವುದಾಗಿದೆ. ಅವರ ಕೃತ್ರಿಮ ದೇವನು ಕಾಣಿಸಬಾರದು. ಲೋಕ ಅದನ್ನು ಪೂರ್ಣವಾಗಿ ಮರೆತು ಬಿಡಬೇಕು ಹಾಗೂ ಏಕ ದೇವನ ಆರಾಧನೆ ಜಾರಿಗೊಳ್ಳಬೇಕು. ನನ್ನ ಆಗಮನದ ಈ ಉದ್ದೇಶ ಲಕ್ಷ್ಯಗಳನ್ನು ನೋಡಿಕೊಂಡು ನನ್ನನ್ನು ಜನರು ಏಕೆ ವಿರೋಧಿಸುತ್ತಾರೆ. ನೆನಪಿಟ್ಟುಕೊಳ್ಳಿರಿ, ನನ್ನ ಜಮಾಅತ್ ಒಂದು ವಾಣಿಜ್ಯೋದ್ಯಮವಾಗಿ ದ್ದರೆ ಅದು ನಾಮಾವಶೇಷವಾಗುವುದು. ಆದರೆ ಅದು ಅಲ್ಲಾಹನಿಂದ ಆಗಿದ್ದರೆ – ನಿಶ್ಚಯವಾಗಿಯೂ ಅದು ಅಲ್ಲಾಹನಿಂದ ಸ್ಥಾಪಿತವಾಗಿದೆ– ಅದನ್ನು ಸರ್ವಲೋಕಗಳೂ ವಿರೋಧಿಸಿದರೂ ಅದು ಅಭಿವೃದಿ ಹೊಂದುವುದು, ಅದು ಹರಡುವುದು. ದೇವದೂತರು ಅದರ ಸಂರಕ್ಷಣೆ ಮಾಡುವರು– ಇನ್‌ಶಾ ಅಲ್ಲಾಹ್. ಒಬ್ಬನಾದರೂ ನನ್ನ ಜೊತೆಗೆ ಇರದಿದ್ದರೂ ಯಾರೊಬ್ಬನೂ ನನಗೆ ಸಹಾಯ ನೀಡದಿದ್ದರೂ ನಾನು ಧೃಢವಾಗಿ ನಂಬುತ್ತೇನೆ, ಈ ಜಮಾಅತ್ ಜಯಶಾಲಿಯಾಗುವುದು.

ಈಗ 127 ವರ್ಷಗಳ ನಂತರ ನಾವು ನೋಡುತ್ತಿದ್ದೇವೆ, ಅಲ್ಲಾಹನ ಬೆಂಬಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದೆ ಎಂದು. ಈ ಜಮಾಅತ್ ಅಲ್ಲಾಹನ ಅನುಗ್ರಹದಿಂದ ಅಭಿವೃದ್ಧಿ ಹೊಂದುತ್ತಾ ಇದೆ. ಆದುದರಿಂದ ನಮ್ಮ ಕಡ್ಡಾಯ ಕರ್ತವ್ಯವೇನೆಂದರೆ, ನಾವು ನಮ್ಮ ಸ್ಥಿತಿಯಲ್ಲಿ ಪರಿಶುದ್ಧ ಬದಲಾವಣೆಯನ್ನು ತಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉದ್ದೇಶ ಲಕ್ಷ್ಯಗಳನ್ನು ಈಡೇರಿಸುವುದರಲ್ಲಿ ಅವರಿಗೆ ಸಹಾಯಕರಾಗ ಬೇಕು. ಅವರ ಆಗಮನದ ಉದ್ದೇಶದ ಈಡೇರುವಿಕೆಯಿಂದ ದೊರ ಕುವ ಅನುಗ್ರಹದ ಪಾಲನ್ನು ಅವರನ್ನು ನಂಬುವುದರ ಮೂಲಕ ನಾವು ಪಡೆಯುವವರಾಗಬೇಕು. ಆದರೆ ವಾಸ್ತವದಲ್ಲಿ, ಅವರು ಹೇಳಿದ ಹಾಗೆ ನಮ್ಮಲ್ಲಿ ಯಾರೊಬ್ಬರ ಸಹಾಯವೂ ಅವರಿಗೆ ಆವಶ್ಯಕವಲ್ಲ. ಅಲ್ಲಾಹನು ಸ್ವತಃ ತನ್ನ ದೂತರ ಮೂಲಕ ಅವರಿಗೆ ಸಹಾಯ ನೀಡಿ ಅವರ ಜಮಾಅತಿಗೆ ಅಭಿವೃದ್ಧಿ ನೀಡುವನು. ಹಾಗೆ ನೀಡುತ್ತಲೂ ಇದ್ದಾನೆ.

ತನ್ನ ಆಗಮನದ ಉದ್ದೇಶವನ್ನು ವಿವರಿಸುತ್ತಾ ಇನ್ನೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಅಲ್ಲಾಹನು ನನ್ನನ್ನು ನಿಯೋಜಸಿದುದು, ಹೂಳಲ್ಪಟ್ಟ ನಿಧಿ ನಿಕ್ಷೇಪಗಳನ್ನು ಲೋಕಕ್ಕೆ ತೋರಿಸಿಕೊಡಲಿಕ್ಕಾಗಿದೆ. ಇಸ್ಲಾಮ್

ಎಂಬ ಅಮೂಲ್ಯ ವಜ್ರಾಭರಣಗಳ ಮೇಲೆ ಆಕ್ಷೇಪಗಳೆಂಬ ಕೊಳಕನ್ನು ಹಾಕಲಾಗಿದೆ. ಆ ಕೊಳಕು ಪದಾರ್ಥಗಳಿಂದ ಅವುಗಳನ್ನು ನಾನು ಮುಕ್ತಗೊಳಿಸಿ ಅವುಗಳನ್ನು ಸ್ವಚ್ಛಗೊಳಿಸಬೇಕಾಗಿದೆ. ಅಲ್ಲಾಹನ ಅಭಿಮಾನ ಈಗ ಬಹಳ ತೀವ್ರವಾಗಿದೆ. ಪವಿತ್ರ ಖುರ್‌ಆನಿನ ಗೌರವವನ್ನು ಪ್ರತಿಯೊಬ್ಬ ನೀಚ ಶತ್ರುವಿನ ಆಕ್ಷೇಪಗಳೆಂಬ ಕೊಳೆಗಳಿಂದ ಮುಕ್ತವನ್ನಾಗಿಯೂ ಪರಿಶುದ್ಧವನ್ನಾಗಿಯೂ ಮಾಡಲು ಅಲ್ಲಾಹನು ಬಯಸುತ್ತಾನೆ. ನಮ್ಮ ಶತ್ರುಗಳು ಲೇಖನಿ ಮೂಲಕ ನಮ್ಮನ್ನು ಆಕ್ರಮಿಸಲು ಬಯಸುವಾಗ ನಾವು ಅವರ ವಿರುದ್ಧ ಲಾಠಿ ಚಲಾಯಿಸಲು ಸಿದ್ಧರಾಗುವುದು ಎಷ್ಟೊಂದು ಮೂರ್ಖತನವಾಗಿದೆ. ನಾನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ, ಇಂತಹ ಪರಿಸ್ಥಿತಿಯಲ್ಲಿ ಯಾರಾದರೂ ಇಸ್ಲಾಮಿನ ಹೆಸರು ಹೇಳಿ ಯುದ್ಧದ ಮೂಲಕ ಉತ್ತರ ನೀಡಲು ಬಯಸುವುದಾದರೆ ಅವನು ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುವವ ನಾಗಿದ್ದಾನೆ. ಅನಾವಶ್ಯಕವಾಗಿ ಖಡ್ಗ ಎತ್ತುವುದನ್ನು ಇಸ್ಲಾಮ್ ಎಂದೂ ಇಚ್ಛೆಸಿರಲಿಲ್ಲ. ಆದುದರಿಂದ ಎಲ್ಲದಕ್ಕಿಂತಲೂ ಮೊದಲು ನೀವು ನಿಮ್ಮ ಹೃದಯವನ್ನೂ ಮಸ್ತಿಷ್ಕವನ್ನೂ ಬಳಸಿ ಕೆಲಸಮಾಡಬೇಕಾದ ಆವಶ್ಯಕತೆಯಿದೆ. ಆತ್ಮಪರಿಶುದ್ಧಿ, ಸತ್ಯಸಂಧತೆ ಮತ್ತು ತಖ್ವದೊಂದಿಗೆ ಅಲ್ಲಾಹನಿಂದ ಸಹಾಯವನ್ನೂ ಜಯವನ್ನೂ ಬೇಡಿಕೊಳ್ಳಬೇಕು. ಇದು ಅಲ್ಲಾಹನ ಎಂದೂ ಬದಲಾಗದ ನಿಯಮವೂ ಅವನ ಸ್ಥಿರ ತತ್ವವೂ ಆಗಿದೆ. ಮುಸ್ಲಿಮರು ಕೇವಲ ಮಾತಿನಿಂದ ಜಯಗಳಿಸಲು ಬಯಸು ವುದಾದರೆ ಅದು ಅಸಾಧ್ಯ. ಅಲ್ಲಾಹನು ಕೇವಲ ವಾಚಾಳಿತನವನ್ನು ಇಷ್ಟಪಡುವುದಿಲ್ಲ. ಅವನು ವಾಸ್ತವಿಕ ತಖ್ವವನ್ನು ಇಚ್ಛೆಸುತ್ತಾನೆ. ಅವನು ಸತ್ಯವಾದ ಪರಿಶುದ್ಧಿಯನ್ನು ಇಷ್ಟಪಡುತ್ತಾನೆ. ಅಲ್ಲಾಹನು ಹೇಳುವು ದನ್ನು ನೋಡಿರಿ: **ಇನ್ನಲ್ಲಾಹ ಮಅಲ್ಲಝೀನತ್ತಖೌ ವಲ್ಲಝೀನಹುಮ್ ಮುಹ್‌ಸಿನೂನ್.** ನಿಶ್ಚಯವಾಗಿಯೂ ಅಲ್ಲಾಹನು ತಖ್ವವನ್ನು ಹೊಂದಿದವರ ಮತ್ತು ಔದಾರ್ಯ ತೋರಿಸುವವರ ಜೊತೆಗಿರುತ್ತಾನೆ.

ನಾವು ನಮ್ಮಲ್ಲಿ ತಖ್ವವನ್ನು ಹೊಂದಿ ಇಸ್ಲಾಮಿನ ಈ ಸುಂದರ ತತ್ವಗಳನ್ನು ಲೋಕಕ್ಕೆ ತೋರಿಸಬೇಕಾಗಿದೆ. ಇಸ್ಲಾಮ್ ಹಬ್ಬುವುದಕ್ಕೆ ತಖ್ವ ಶರತ್ತಾಗಿದೆ ಎಂದು ಇತರ ಮುಸ್ಲಿಮರಿಗೂ ತಿಳಿಸಬೇಕಾಗಿದೆ. ದೌರ್ಜನ್ಯ ಮತ್ತು ಅತಿಕ್ರಮಣಗಳಲ್ಲಿ ವೃದ್ಧಿ ಹೊಂದುವುದಕ್ಕೆ ಬದಲಾಗಿ ತಖ್ವವನ್ನು ಹೊಂದಿ ತಖ್ವದಲ್ಲಿ ವೃದ್ಧಿಗಳಿಸುವುದು ಆವಶ್ಯಕವೆಂದು ಅವರಿಗೆ ತಿಳಿಸಬೇಕು. ಇಸ್ಲಾಮಿನ ಹೆಸರಲ್ಲಿ ಮಾಡಲಾಗುವ ಈ ಆಕ್ರಮಣಗಳು ಇಸ್ಲಾಮಿಗೆ ಬೆಂಬಲ ನೀಡುವವುಗಳಾಗಿಲ್ಲ. ಅವು ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುವವುಗಳಾಗಿವೆ. ನಿರಪರಾಧಿಗಳನ್ನು ಹತ್ಯೆ ಮಾಡುವುದು ಅಲ್ಲಾಹನು ಕೋಪಗೊಳ್ಳಲು ಕಾರಣವಾಗುತ್ತದೆ.

ಕೆಲವು ದಿನಗಳ ಹಿಂದೆ ಬೆಲ್‌ಜಿಯಂ ದೇಶದಲ್ಲಿ ನಿಷ್ಕಳಂಕರನ್ನು ಹತ್ಯೆ ಮಾಡವ ಭೀಕರ ಕೃತ್ಯ ನಡೆದಿದೆ. ಅನೇಕ ನಿರಪರಾಧಿಗಳಾದ ಜನರು ಕೊಲ್ಲಲ್ಪಟ್ಟರು. ನೂರಾರು ಜನರು ಗಾಯಗೊಂಡರು. ಇಂತಹ ಕೃತ್ಯ ಮಾಡಿದವರು ಎಂದೂ ಅಲ್ಲಾಹನ ಸಂಪ್ರೀತಿಗಳಿಸಲಾರರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈಗ ಧರ್ಮಕ್ಕೋಸ್ಕರ ಯುದ್ಧ ಮಾಡುವುದು ನಿಷಿದ್ಧ ಎಂದು ಘೋಷಿಸಿರುವಾಗ ಈ ಜನರ ಕೃತ್ಯಗಳು ಅಲ್ಲಾಹನ ಕೋಪವನ್ನು ಬರಿಸುವಂತಹವು ಗಳಾಗಿವೆ. ಈ ಕಾಲದಲ್ಲಿ ಯಾರೂ ಸಹ ನಮಗೆ ಈ ಸಂದೇಶ ಲಭಿಸಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಸಂದೇಶ, ಧರ್ಮಕ್ಕೋಸ್ಕರ ಯುದ್ಧ ನಿಷಿದ್ಧ ಎಂಬ ಸಂದೇಶ ಪ್ರತಿಯೊಬ್ಬನಿಗೆ ತಿಳಿದಿದೆ. ಆದುದರಿಂದ ಧರ್ಮದ ಹೆಸರಲ್ಲಿ ಈರೀತಿ ದೌರ್ಜನ್ಯ ಮಾಡುವವರಿಗೆ, ಮುಸ್ಲಿಮರಾ ಗಿದ್ದುಕೊಂಡು ದೌರ್ಜನ್ಯವೆಸಗುವವರಿಗೆ ಅಲ್ಲಾಹನು ಬುದ್ಧಿ ನೀಡಲಿ. ಸರಕಾರಗಳು ಮತ್ತು ಇತರ ಗುಂಪುಗಳು ಈ ಕಾಲಘಟ್ಟದ ಇಮಾಮರ ಧ್ವನಿಯನ್ನು ಆಲಿಸಬೇಕು. ಮತ್ತು ದೌರ್ಜನ್ಯ ಮಾಡುವು ದನ್ನು ಬಿಟ್ಟುಬಿಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿ ಸ್ಸಲಾಮರಿಗೆ ಅಲ್ಲಾಹನು ನೀಡಿದ ವಾಸ್ತವಿಕ ಆಯುಧವನ್ನು ಬಳಸ ಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈಗ ಆವಶ್ಯಕವಾಗಿರುವುದು ಖಡ್ಗವಲ್ಲ, ಲೇಖನಿಯ ಆವಶ್ಯಕತೆ ಇದೆ ಎಂದು ನೀವು ದೃಢವಾಗಿ ನಂಬಿರಿ. ನಮ್ಮ ಶತ್ರುಗಳು ಇಸ್ಲಾಮಿನ ಬಗ್ಗೆ ವಿವಿಧ ಸಂಶಯಗಳನ್ನು ಪ್ರಕಟಿಸಿದ್ದಾರೆ. ವಿವಿಧ ವಿಜ್ಞಾನಗಳ ಮತ್ತು ಉಪಾಯಗಳ ಮೂಲಕ ಅಲ್ಲಾಹನ ಸತ್ಯಧರ್ಮದ ಮೇಲೆ ಆಕ್ರಮಣ ಮಾಡಲು ಇಚ್ಛೆಸಿದ್ದಾರೆ. ಅದರ ಬಗ್ಗೆ ಅಲ್ಲಾಹನು ನನ್ನ ಗಮನ ಸೆಳೆದಿದ್ದಾನೆ. ನಾನು ಲೇಖನಿ ಎಂಬ ಆಯುಧ ಧರಿಸಿ ವಿಜ್ಞಾನ ಮತ್ತು ವಿದ್ಯೆಯ ಅಭಿವೃದ್ಧಿಯ ಕಾರ್ಯಕ್ಷೇತ್ರದಲ್ಲಿ ಇಳಿದು ಇಸ್ಲಾಮಿನ ಆಧ್ಯಾತ್ಮಿಕ ಶೌರ್ಯ ಮತ್ತು ಆಂತರಿಕ ಶಕ್ತಿಯ ಪವಾಡ ತೋರಿಸಬೇಕೆಂದು ಅಲ್ಲಾಹನು ಬಯಸಿದ್ದಾನೆ. ಇಸ್ಲಾಮಿನ ವಿರುದ್ಧ ಮಾಡಲಾದ ಆಕ್ಷೇಪಗಳನ್ನು ಮತ್ತು ಆಕ್ರಮಣಗಳನ್ನು ನಾನು ಒಮ್ಮೆ ಎಣಿಸಿದ್ದೆ. ಆಗ ನನ್ನ ಅಂದಾಜು ಪ್ರಕಾರ ಅವುಗಳ ಸಂಖ್ಯೆ ಮೂರು ಸಾವಿರದಷ್ಟು ಆಗಿತ್ತು. ಈ ಆಕ್ಷೇಪಗಳು ಸಂಕುಚಿತ ದೃಷ್ಟಿ ಹೊಂದಿದವರ ಮತ್ತು ತಿಳಿಗೇಡಿ ಗಳ ದೃಷ್ಟಿಯಲ್ಲಿ ಆಕ್ಷೇಪಗಳು ಆಗಿವೆ. ಆದರೆ ನಾನು ಸತ್ಯವಾಗಿ ಹೇಳುತ್ತೇನೆ. ನಾನು ಈ ಆಕ್ಷೇಪಗಳನ್ನು ಎಣಿಸಿದಾಗ ಮತ್ತು ನಾನು ಆ ಆಕ್ಷೇಪಗಳನ್ನು ತಳಸ್ಪರ್ಶಿಯಾಗಿ ಪರಿಶೀಲಿಸಿದಾಗ, ಅವುಗಳ ಅಡಿಯಲ್ಲಿ ಅಪರೂಪದ ಸತ್ಯಗಳಿರುವುದಾಗಿ ಕಂಡೆನು. ಅವು ಆಕ್ಷೇಪಗಾರರಿಗೆ ಅವರ ದೃಷ್ಟಿಹೀನತೆ ಕಾರಣ ಗೋಚರಿಸಲಿಲ್ಲ. ವಾಸ್ತವಿಕವಾಗಿ ಅಲ್ಲಾಹನ ಜಾಣ್ಮೆ ಅವುಗಳಲ್ಲಿ ಗೋಚರಿಸುತ್ತದೆ. ಅಂಧನಾದ ಆಕ್ಷೇಪಗಾರನು ಎಲ್ಲಿಗೆ ಬಂದು ತಡೆಯಲ್ಪಟ್ಟನೋ ಅಲ್ಲಿಯೇ ಸೂಕ್ಷ್ಮ ಜ್ಞಾನದ ರಹಸ್ಯ ಖಜಾನೆಗಳು ಇವೆ.

ಇಸ್ಲಾಮೀ ಪ್ರಕಾಶವನ್ನು ಪ್ರಕಟಿಸಲು ತನ್ನನ್ನು ಕಳುಹಿಸಲಾಗಿದೆ. ಮತ್ತು ಕ್ರೈಸ್ತರ ನಂಬಿಕೆಗಳು ಸ್ವತಃ ಅವರಿಗೆ ಮನವರಿಕೆ ಆಗಿಲ್ಲ ಎನ್ನುವುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಅವರು ತಮ್ಮ ಕುತ್ತಿಗೆಗೆ ತೂಗು ಹಾಕಿದ ಡೋಲನ್ನು ಬಾರಿಸುತ್ತಿದ್ದಾರೆ. ಈ ಜನರ ನಂಬಿಕೆಗಳನ್ನು ಎಲ್ಲಿಯ ತನಕ ವಿವರಿಸಲು ಸಾಧ್ಯ. ಇಸ್ಲಾಮ್ ಪ್ರತಿಪಾದಿಸುತ್ತಿರುವುದೇ ಸತ್ಯವಾಗಿದೆ. ಅಲ್ಲಾಹನು ನನ್ನನ್ನು ನಿಯೋಜಿಸಿರುವನು. ಸತ್ಯಾನ್ವೇಷಿಗಳಿಗೆ ಇಸ್ಲಾಮಿನ ಪ್ರಕಾಶವನ್ನು ತೋರಿಸಿ ದೇವನಿದ್ದಾನೆಂಬುದು ಸತ್ಯವೆಂದು ಸಾಬೀತುಗೊಳಿಸಲಿಕ್ಕಿದೆ. ಇಸ್ಲಾಮಿಗೆ ದೊರೆತ ಅನುಗ್ರಹ ವೇನೆಂದರೆ ಪ್ರತಿಯೊಂದು ಕಾಲಘಟ್ಟದಲ್ಲಿ ಅದಕ್ಕೆ ಬೆಂಬಲ ನೀಡುವ ದೃಷ್ಟಾಂತಗಳು ಇರುತ್ತವೆ. ಈ ಕಾಲಘಟ್ಟದಲ್ಲೂ ಇಸ್ಲಾಮ್ ಅದರಿಂದ ವಂಚಿತವಾಗಿಲ್ಲ. ಇಸ್ಲಾಮಿನ ವೈಶಿಷ್ಟವಾಗಿರುವ, ಅದಕ್ಕೆ ಬೆಂಬಲ ನೀಡುವ ದೃಷ್ಟಾಂತಗಳನ್ನು ಪ್ರಕಟಿಸಿ ಇಸ್ಲಾಮಿನ ಸತ್ಯವನ್ನು ಲೋಕದಲ್ಲಿ ಬಹಿರಂಗ ಪಡಿಸಲಿಕ್ಕಾಗಿಯೇ ನಾನು ನಿಯೋಜಿತನಾಗಿರುವೆನು. ಶುದ್ಧ ಹೃದಯನಾಗಿ ಸತ್ಯವನ್ನು ಗಳಿಸಲು

ನನ್ನ ಬಳಿಗೆ ಬರುವವನು ಅನುಗ್ರಹ ಗಳಿಸಿದವನಾಗಿದ್ದಾನೆ. ಅಂತೆಯೇ ಗ್ರಹಿಸಿಕೊಂಡ ಸತ್ಯವನ್ನು ಸ್ವೀಕರಿಸುವವನು ಅನುಗ್ರಹೀತನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಮುಸ್ಲಿಮರು ನಂಬುವ ಹಝ್ರತ್ ಈಸಾ ಅಲೈಹಿಸ್ಸಲಾಮರು ಆಕಾಶದಲ್ಲಿ ಜೀವಿಸಿರುವರು ಎಂಬ ತಪ್ಪು ನಂಬಿಕೆಯನ್ನು ರದ್ದುಗೊಳಿಸಿ ಅವರೊಂದಿಗೆ ಸ್ಪಷ್ಟವಾಗಿ ಹೇಳಿದರು: ಈ ತಪ್ಪು ನಂಬಿಕೆಯನ್ನು ನೀಗಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ. ಕ್ರೈಸ್ತರು ಮುಸ್ಲಿಮರಲ್ಲಿ ಸೃಷ್ಟಿಸಿರುವ ಈ ತಪ್ಪು ನಂಬಿಕೆಯನ್ನು ಬೇರು ಸಹಿತ ಕಿತ್ತೆಸೆಯಲು ನನ್ನನ್ನು ಕಳುಹಿಸಲಾಗಿದೆ. ಮಸೀಹರ ಆಗಮನದ ಆವಶ್ಯಕತೆ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ಬೇರೆ ಆವಶ್ಯಕ ಕಾರಣಗಳನ್ನು ಬಿಟ್ಟುಬಿಡುವುದಾದರೂ ಹಝ್ರತ್ ಮೂಸಾ ಅಲೈಹಿಸ್ಸಲಾಮರೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೋಲಿಸಿ ಹೇಳಿದ ಕಾರಣದಿಂದ ಮಸೀಹರ ಆಗಮನ ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಆಗಮನದ ನಂತರ ಹದಿನಾಲ್ಕನೇ ಶತಮಾನದಲ್ಲಿ ಆಗಮಿಸಿದ್ದರು. ನಾನು ನಿಮಗೆ ಬುರೂಝೀ ಆಗಮನದ ಒಂದು ಉದಾಹರಣೆ ನೀಡುತ್ತೇನೆ. ಆದರೆ ಹಝ್ರತ್ ಈಸಾ ಮಸೀಹರೇ ಸ್ವತಃ ಪುನಃ ಆಗಮಿಸಬೇಕೆಂದು ವಾದಿಸುವವರು ಅಂತಹ ಒಂದು ಉದಾಹರಣೆ ತೋರಿಸಬೇಕು. ಆದರೆ ಅವರಿಗೆ ಅಂತಹ ಉದಾಹರಣೆ ನೀಡಲು ಸಾಧ್ಯವಾಗದಿದ್ದರೆ – ಖಂಡಿತವಾಗಿಯೂ ಅವರಿಗೆ ಅದು ಸಾಧ್ಯವಿಲ್ಲ — ಅವರು ಏಕೆ ಹೊಸದಾದ ವಾದ ಮಾಡುತ್ತಿದ್ದಾರೆ. ಅವರು ಹೊಸದಾಗಿ ಸೃಜಿಸಿದ ಮಾತುಗಳನ್ನು ಆಡುತ್ತಾರೆ. ಆದುದರಿಂದ ಆ ರೀತಿಯ ಹೊಸದಾದ ಮಾತುಗಳನ್ನು ಬಿಟ್ಟುಬಿಡಿರಿ. ಏಕೆಂದರೆ ಅದು ನಾಶದ ಮಾರ್ಗವಾಗಿದೆ. ನನಗೆ ಮುಸ್ಲಿಮರ ಸ್ಥಿತಿಯ ಬಗ್ಗೆ ಖೇದ ಉಂಟಾಗುತ್ತದೆ. ಅವರ ಮುಂದೆ ಯಹೂದಿಯರ ಉದಾಹರಣೆ ಇದೆ. ಮುಸ್ಲಿಮರು ಐದು ಹೊತ್ತು ನಮಾಝ್‌ನಲ್ಲಿ **ಗೈರಿಲ್ ಮಗ್‌ಝೂಬಿ ಅಲೈಹಿಮ್** (ನಿನ್ನ ಕೋಪಕ್ಕೆ ಪಾತ್ರರಾದವರ ಮಾರ್ಗದಲ್ಲಿ ನಮ್ಮನ್ನು ನಡೆಸಬೇಡ) ಎಂದು ಪ್ರಾರ್ಥಿಸುತ್ತಾರೆ. ಅಲ್ಲಾಹನ ಕೋಪಕ್ಕೆ ಪಾತ್ರರಾದ ವರು ಯಹೂದಿಯರು ಎಂದು ಒಮ್ಮತದಿಂದ ಅಂಗಕರಿಸುತ್ತಾರೆ. ಹಾಗಿದ್ದೂ ಮುಸ್ಲಿಮರು ಯಹೂದಿಯರ ಮಾರ್ಗ ಅವಲಂಬಿಸುತ್ತಿರುವುದು ಏಕೆಂದು ನನಗೆ ಅರ್ಥವಾಗುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸತ್ಯ ಸಾಕ್ಷ್ಯವಾಗಿ ನಾಲ್ಕು ವಿಧ ದೃಷ್ಟಾಂತಗಳನ್ನು ಪ್ರಸ್ತಾಪಿಸುತ್ತಾ ಈರೀತಿ ಹೇಳುತ್ತಾರೆ: ''ಪ್ರಥಮ ದೃಷ್ಟಾಂತ ಅರಬಿ ಭಾಷೆಯ ಜ್ಞಾನದ ಬಗ್ಗೆ ಯಾಗಿದೆ. ಮುಹಮ್ಮದ್ ಹುಸೈನ್ ಬಟಾಲವಿ ನನ್ನ ಬಗ್ಗೆ, ನಿನಗೆ ಅರಬಿ ಭಾಷೆಯ ಒಂದು ಕ್ರಿಯಾರೂಪವೂ ತಿಳಿದಿಲ್ಲ ಎಂದು ಬರೆದಿದ್ದರು. ನನಗೆ ಅರಬಿ ಭಾಷೆಯ ಕ್ರಿಯಾರೂಪಗಳು ತಿಳಿದಿದೆ ಎಂದು ಆಗ ನಾನು ವಾದಿಸಿರಲಿಲ್ಲ. ಆದರೆ, ಮುಹಮ್ಮದ್ ಹುಸೈನ್ ಬಟಾಲವಿ ನನ್ನ ಬಗ್ಗೆ ಈರೀತಿ ಬರೆದ ನಂತರ ಅಲ್ಲಾಹನು ಅದ್ಭುತಕರ ವಾಗಿ ನನಗೆ ಸಹಾಯ ಮಾಡಿದನು. ಅನಂತರ ನಾನು ಅರಬಿ ಭಾಷೆಯ ಪುಸ್ತಕಗಳನ್ನು ಬಹುಮಾನ ನೀಡುವ ಪ್ರಸ್ತಾಪದೊಂದಿಗೆ ಪ್ರಕಟಿಸಿದೆನು. ನಾನು ಹೇಳಿದೆ: ನೀವು ಯಾರಿಂದ ಬೇಕಾದರೂ ಸಹಾಯ ಪಡೆಯಿರಿ. ಅರಬಿ ಮಾತೃ ಭಾಷೆಯಾಗಿರುವವರನ್ನು ನಿಮ್ಮೊಂದಿಗೆ ಸೇರಿಸಿಕೊಂಡು ನನ್ನ ಅರಬಿ ಪುಸ್ತಕಗಳಿಗೆ ಉತ್ತರ ಬರೆಯಿರಿ. ಅಲ್ಲಾಹನು ನನ್ನೊಂದಿಗೆ ದೃಢವಾಗಿ ಹೇಳಿದ್ದನು: ಅವರಿಗೆ ಖಂಡಿತವಾಗಿಯೂ ಹಾಗೆ ಮಾಡಲು ಸಾಧ್ಯವಾಗದು ಎಂದು. ಏಕೆಂದರೆ ಈ ದೃಷ್ಟಾಂತವನ್ನು ನನಗೆ ಪವಿತ್ರ ಖುರ್‌ಆನಿನ ಅದ್ಭುತಗಳಲ್ಲಿ ಒಂದಾಗಿ, ನೆರಳಿನ ರೂಪದಲ್ಲಿ ನನಗೆ ನೀಡಲಾಗಿದೆ.

ಎರಡನೆಯ ದೃಷ್ಟಾಂತ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವುದಾಗಿದೆ. ಅರಬಿ ಪುಸ್ತಕಗಳನ್ನು ಬರೆಯುತ್ತಿರುವಾಗ ನಾನು ಅನುಭವಿಸಿ ನೋಡಿದೆ– ನನ್ನ ಪ್ರಾರ್ಥನೆಗಳು ಎಷ್ಟು ಹೆಚ್ಚಾಗಿ ಅಂಗೀಕರಿಸಲ್ಪಟ್ಟಿವೆ ಎಂದು.

ಮೂರನೆಯ ದೃಷ್ಟಾಂತ ಭವಿಷ್ಯವಾಣಿಗಳಾಗಿವೆ. ಅವು ಅದೃಶ್ಯ ಸಮಾಚಾರಗಳ ಪ್ರಕಟಣೆಯಾಗಿವೆ. ಅಲ್ಲಾಹನಿಂದ ಇಲ್‌ಹಾಮ್ ಪಡೆದು ಪ್ರಕಟಿಸುವ ಅದೃಶ್ಯ ಸಮಾಚಾರಗಳು ಅದರೊಳಗೆ ದೈವಿಕ ಶಕ್ತಿಯನ್ನು ಹೊಂದಿರುತ್ತದೆ. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳಿದೆ: **ಲಾ ಯುಝ್ಹಿರು ಅಲಾ ಗೈಬಿಹೀ ಅಹದನ್ ಇಲ್ಲಾ ಮನಿರ್‌ತಝಾ ಮಿನ್ ರಸೂಲ್.** ಅಲ್ಲಾಹನು ಆಯ್ಕೆ ಮಾಡಿದ ತನ್ನ ಸಂದೇಶವಾಹಕನಿಗೆ ಹೊರತು ಬೇರೆ ಯಾರಿಗೂ ಅದೃಶ್ಯ ಸಮಾಚಾರಗಳನ್ನು ಪ್ರಕಟಿಸುವುದಿಲ್ಲ. ಇಲ್ಲಿ ಬಳಸಲಾದ ಇಝ್‌ಹಾರ್ (ಪ್ರಕಟಿಸು) ಎಂಬ ಶಬ್ದ ಸ್ಪಷ್ಟಪಡಿಸುವುದೇನೆಂದರೆ ಆ ಸಮಾಚಾರದೊಳಗೆ ಒಂದು ಭವ್ಯತೆ ಮತ್ತು ಶಕ್ತಿ ಇದೆ ಎಂದಾಗಿದೆ.

ನಾಲ್ಕನೆಯ ದೃಷ್ಟಾಂತ ಪವಿತ್ರ ಖುರ್‌ಆನಿನ ವಾಸ್ತವಿಕ ಜ್ಞಾನದ ಗಳಿಕೆಯಾಗಿದೆ. ಏಕೆಂದರೆ ಪವಿತ್ರ ಖುರ್‌ಆನಿನ ಜ್ಞಾನವು ಪರಿಶುದ್ಧತೆ ಹೊಂದಿದವನ ಹೊರತು ಬೇರೆ ಯಾರಿಗೂ ಲಭಿಸಲಾರದು. ಪವಿತ್ರ ಖುರ್‌ಆನ್ ಹೇಳಿದೆ **ಲಾ ಯಮಸ್ಸಹೂ ಇಲ್ಲಲ್ ಮುತಹ್ಹರೂನ್** (ಪರಿಶುದ್ಧರಾದವರ ಹೊರತು ಬೇರೆ ಯಾರೂ ಅದನ್ನು ಸ್ಪರ್ಶಿಸಲಾರರು) ಎಂದು. ನಾನು ಅನೇಕ ಸಾರಿ ಹೇಳಿದ್ದೇನೆ. ನನ್ನ ವಿರೋಧಿಗಳು ಸಹ ಪವಿತ್ರ ಖುರ್‌ಆನಿನ ಒಂದು ಅಧ್ಯಾಯದ ವ್ಯಾಖ್ಯಾನ ಮಾಡಲಿ ನಾನು ಸಹ ವ್ಯಾಖ್ಯಾನ ಮಾಡುವೆನು. ಆಗ ಸ್ಪರ್ಧೆಯಲ್ಲಿ ಯಾರ ವ್ಯಾಖ್ಯಾನ ಶ್ರೇಷ್ಠವೆಂದು ತಿಳಿಯಬಹುದು. ಆದರೆ ಯಾರೂ ಧೈರ್ಯ ತೋರಿಸಿ ಮುಂದೆ ಬರಲಿಲ್ಲ. ಒಟ್ಟಾರೆ ಹೇಳುವುದಾದರೆ ನನ್ನ ಸತ್ಯಕ್ಕೆ ಸಾಕ್ಷ್ಯವಾಗಿ ಈ ನಾಲ್ಕು ದೃಷ್ಟಾಂತಗಳು ನನಗೆ ಲಭಿಸಿವೆ.

ನಾವು ಭಾಗ್ಯಶಾಲಿಗಳಾಗಿದ್ದೇವೆ. ಆಗಮಿಸಿದ ವಾಗ್ದತ್ತ ಮಸೀಹರನ್ನು ನಾವು ನಂಬಿದೆವು. ನಾವು ಬೈಅತ್ ಮಾಡಿ ನಮ್ಮೊಳಗೆ ಪರಿಶುದ್ಧ ಬದಲಾವಣೆ ಉಂಟುಮಾಡುವ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ನಮ್ಮಲ್ಲಿ ಅಳವಡಿಸುವ ಪ್ರತಿಜ್ಞೆ ಮಾಡಿದ್ದೇವೆ. ನಾವು ಕೃತಜ್ಞತೆಯ ಸಾಷ್ಟಾಂಗ ಪ್ರಣಾಮ ಮಾಡುವವರಲ್ಲಿ ಸೇರಿರುವೆವು. ನಾವು ದೃಷ್ಟಿ ತಿರುಗಿಸಿ ದಾಟಿ ಹೋಗುವವರೊಂದಿಗೆ ಸೇರಿದವರಾಗಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಗಮಿಸಿ ಇಸ್ಲಾಮಿನ ಪುನಶ್ಚೇತನ ಪ್ರಾರಂಭವಾದ ಈ ಕಾಲದಲ್ಲಿ ನಾವು ಜನಿಸುವಂತೆ ಮಾಡಿದುದು ಅಲ್ಲಾಹನು ನಮಗೆ ನೀಡಿದ ಅನುಗ್ರಹ ಮತ್ತು ಅವನ ಔದಾರ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾವು ಜೀವಂತ ದೇವನನ್ನು ಕಾಣುವಂತೆ ಮಾಡಿದರು. ಅವನು ಹಿಂದೆ ಆಲಿಸುತ್ತಾ ಇದ್ದ ಹಾಗೆ ಮತ್ತು ಮಾತನಾಡುತ್ತಾ ಇದ್ದ ಹಾಗೆ ಇಂದು ಸಹ ಆಲಿಸುತ್ತಾನೆ ಮತ್ತು ಮಾತನಾಡುತ್ತಾನೆ. ಆದುದರಿಂದ ನಾವು ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ.

ಮತ್ತೊಂದು ವಿಷಯ, ಮಾರ್ಚ್ 23ಕ್ಕೆ ಸಂಬಂಧಿಸಿ ಕೆಲವು ಜನರು ಪರಸ್ಪರ ಮೆಸ್ಸೇಜ್‌ಗಳ ಮೂಲಕ ಇಂದಿನ ರೀತಿಗಳ ಪ್ರಕಾರ ಶುಭಾಶಯ ಕೋರುತ್ತಿದ್ದರು. ಫೋನ್ ಮೂಲಕ ವಾಟ್ಸ್‌ಅಪ್ ಮೊದಲಾದವುಗಳ ಮೂಲಕ ಅವರು ಸಂದೇಶ ಕಳುಹಿಸುವುದರ ಉದ್ದೇಶ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವೆವು, ಅದರ ಬಗ್ಗೆ ಕೃತಜ್ಞತೆ ಸೂಚಿಸುತ್ತಾ ನಾವು ಸನ್ಮಾರ್ಗ ಗಳಿಸಿದ ಮುಸ್ಲಿಮರಲ್ಲಿ ಸೇರಿದೆವು, ಧರ್ಮಕ್ಕೆ ಸೇವೆಮಾಡುತ್ತಾ ಅದರ ಶ್ರೇಷ್ಠತೆಯನ್ನು ಲೋಕದಲ್ಲಿ ಹರಡುವವರಾಗಿದ್ದೇವೆ ಎಂಬುದನ್ನು ಪ್ರಕಟಪಡಿಸಲಿಕ್ಕಾಗಿ ಈ ಮೆಸ್ಸೇಜ್ ಕಳುಹಿಸಿರುವುದಾದರೆ, ಅದು ಆ ರೀತಿ ಮೆಸ್ಸೇಜ್ ಕಳುಹಿಸುವವರಿಗೆ ಅದು ಅರ್ಹವಾದ ಕೆಲಸವಾಗಿದೆ. ಇದರಲ್ಲಿ ಯಾವುದೇ ದೋಷವಿಲ್ಲ. ಅದು ನವೀನಾಚರಣೆಯೂ ಅಲ್ಲ. ನನಗೆ ಆಶ್ಚರ್ಯವಾಯಿತು, ಇಂತಹ ಮೆಸ್ಸೇಜ್ ಕಳುಹಿಸಿದವರಿಗೆ ಒಬ್ಬರು ಅದೇ ರೀತಿಯ ಮೆಸ್ಸೇಜ್ ಮೂಲಕ ಒಂದು ಪತ್ರ ಬರೆದು, ತೀವ್ರವಾಗಿ ಈ ಕ್ರಮವನ್ನು ಖಂಡಿಸಿ ನೀವು ಇತರ ಮುಸ್ಲಿಮರ ಹಾಗೆ ನವೀನಾಚರಣೆಗಳಲ್ಲಿ ಮುಳುಗುವಿರಿ ಎಂದು ಹೇಳಿದ್ದಾಗಿ ತಿಳಿದು ಬಂತು. ಹಾಗೆ ಖಂಡಿಸಿದವರು ನಾನು ತಿಳಿದ ಮಟ್ಟಿಗೆ ಆ ವ್ಯಕ್ತಿ ಧಾರ್ಮಿಕ ಜ್ಞಾನ ಗಳಿಸಿದವರಾಗಿದ್ದಾರೆ. ಅವರಿಗೆ ಜಮಾಅತಿನ ನಿಝಾಮ್ ಬಗ್ಗೆ ಸಹ ತಿಳಿದಿದೆ. ಆದರೆ ಅವರು "ನೀವು ನವೀನಾಚರಣೆ ಮಾಡುವವರಾಗುವಿರಿ" ಎಂದು ಹೇಳಲು ಹೇಗೆ ತಾನೆ ಸಾಧ್ಯ. ಅವರು ಸಹ ಖಿಲಾಫತ್ ಗುರಾಣಿಯ ಹಿಂದೆ ನಿಂತು ಮಾತನಾಡಬೇಕಾಗಿತ್ತು. ಖಿಲಾಫತ್‌ನ ಹೆಜ್ಜೆಗಿಂತ ಮುಂದೆ ಹೆಜ್ಜೆ ಹಾಕಲು ಪ್ರಯತ್ನ ಮಾಡಬಾರದು. ಯಾರು ಹಾಗೆ ಮಾಡಲು ಪ್ರಯತ್ನಿಸುತ್ತಾರೋ ಅಂತಹ ಜನರು ಜಾರಿ ಬೀಳುವರು. ನೆನಪಿಡಿರಿ, ಅವರ ಹೃದಯದಲ್ಲಿ ಮೆಸ್ಸೇಜ್ ಕಳುಹಿಸುವ ಬಗ್ಗೆ ವಿರುದ್ಧಾಭಿಪ್ರಾಯವಿದ್ದಲ್ಲಿ ಅವರು ನನಗೆ ಬರೆಯಬೇಕಾಗಿತ್ತು. ಈ ಕ್ರಮವನ್ನು ತಡೆಯಬೇಕಾಗಿದ್ದರೆ ಅದು ಆಯಾ ಕಾಲದ ಖಲೀಫರ ಹೊಣೆಗಾರಿಕೆಗೆ ಸೇರಿದೆ. ಅವರು ಜಮಾಅತಿನ ನಿಝಾಮ್ ಮೂಲಕ ಅದನ್ನು ತಡೆಯಲು ಪ್ರಯತ್ನಿಸಬೇಕಿತ್ತು. ಅಲ್ಲಾಹನು ನಮಗೆಲ್ಲರಿಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಮನವರಿಕೆ ಮಾಡಲು ಮತ್ತು ಅದರ ಪ್ರಕಾರ ಕಾರ್ಯೋನ್ಮುಖರಾಗಲು ಭಾಗ್ಯ ನೀಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್‍ರಮ ಮಹ್‌ಮೂದ ಸಅದೀ ಸಾಹೇಬ (ಮುಕರ್‍ರಮ್ ಮುಸ್ಲಿಹುದ್ದೀನ್ ಸಅದಿ ಸಾಹೇಬರ ಪತ್ನಿ), ಮತ್ತು ಮುಕರ್‍ರಮ ಸಯ್ಯಿದ ಮುಬಾರಕ ಬೇಗಮ್ ಸಾಹೇಬ (ಮುಕರ್‍ರಮ್ ಅಬ್ದುಲ್ ಬಾರೀ ಸಾಹೇಬರ ಪತ್ನಿ) ಇವರ ಜನಾಝು ಹಾಝಿರ್ ಜೊತೆಗೆ ಮುಕರ್‍ರಮ್ ನೂರುದ್ದೀನ್ ಚೆರಾಗ್ ಸಾಹೇಬ್ (ಖಾದಿಯಾನಿನ ಚೆರಾಗ್ ದೀನ್ ಸಾಹೇಬರ ಪುತ್ರ) ಇವರ ಸದ್ಗುಣಗಳನ್ನು ವಿವರಿಸಿ ಅವರ ಜನಾಝು ನಮಾಝ್ ಬಗ್ಗೆ ಪ್ರಕಟಿಸಿದರು. (ನೂರುದ್ದೀನ್ ಚೆರಾಗ್ ಸಾಹೇಬರು ಲಂಡನ್‌ನಲ್ಲಿ ನಿಧನಹೊಂದಿದ್ದರು).

——————————*****——————————


***Friday Sermon delivered by Hadrath Khaleefatul Masih Al Khamis****(atba)*

*at Masjid Baithul Futhuh, London on 25-03-2016.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon